Production of Hybrid Jowar

87. Sri N. L. BELLAD (Ranebennur).—

Will the Minister for Development and Co-operation be pleased to state :—

(*a*) whether the Ranebennur Taluk Agricultural Produce Co-operative Marketing Society, Ltd. Ranebennur was permitted to take up the scheme for producing hybrid jowar in Konada, Tambigi and Hediyala Villages of Ranebennur Taluk ;

(*b*) whether it is a fact that it is shown that from Konada-Tambigi scheme the Society has sustained a loss of Rs. 23,000 ; whether it is also a fact that about Rs. 22,000 derived from the sale of jowar produced from Hediyala Scheme was received by the Chairman's relative of the said Society without crediting it into the Society's account ;

(*c*) the action taken against the Chairman of the Society who has mis-appropriated the funds ?

A.—Sri P. M. NADGOUDA (Minister for Development and Co-operation).—

(*a*) No.

(*b*) and (*c*) The matter is under investigation.

ಶ್ರೀ ಎನ್. ಎಲ್. ಬೆಲ್ಲದ.—ಉತ್ತರದಲ್ಲಿ ತನಿಖೆ ನಡೆಸರಾಗುತ್ತಿದೆಯೆಂದು ತಿಳಿಪಿದ್ದೀರಿ. ಯಾವ ತಾರೀಖಿನಿಂದ ಪ್ರಾರಂಭಿಸಿದ್ದೀರಿ ?

†ಶ್ರೀ ಪಿ. ಎಂ. ನಾಡಗೌಡ.—ಆ ತಾರೀಖು ಈ ದಿವಸ ನನಗೆ ತಿಳಿಯದು ಬೇಕಾದರೆ ವಿಚಾರಿಸಿ ತಿಳಿಸುತ್ತೇನೆ. ಸ್ಪೆಷಲ್ ಆಫೀಸರು ತನಿಖೆ ಪ್ರಾರಂಭಿಸಿದ್ದಾರೆ.

ಶ್ರೀ ಎನ್. ಎಲ್. ಬೆಲ್ಲದ.—ತನಿಖೆ ಪ್ರಾರಂಭಿಸಿ ಎಷ್ಟು ದಿವಸವಾಗಿದೆ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ವಿಚಾರಮಾಡಿ ಹೇಳಬೇಕು.

ಶ್ರೀ ಎನ್. ಎಲ್. ಬೆಲ್ಲದ.—ಎಷ್ಟು ವಸಗಳಲ್ಲಿ ತನಿಖೆ ಮುಗಿಯಬಹುದು ?

ಶ್ರೀ ಪಿ. ಎಂ. ನಾಡಗೌಡ.— ಶಿಘ್ರವಾಗಿ ಮುಗಿಸಲು ಸರಕಾರ ಕ್ರಮ ಕೈಕೊಳ್ಳುತ್ತದೆ.

Sri SIDDIAH KASHIMATH.—May I know the amount sanctioned to this society for this scheme ?

Sri P. M. NADGOUDA.—The investment under the scheme is Rs. 45,167. The society has derived an income of Rs. 20,000.

ಶ್ರೀ ಜಿ. ದುಗ್ಗಪ್ಪ—ಈ ಸೊಸೈಟಿಯಲ್ಲಿ ದುರ್ವ್ಯವಹಾರ ನಡೆದಿರುವುದು ಸರಕಾರಕ್ಕೆ ಯಾವಾಗ ಗೊತ್ತಾಯಿತು ? ಇನ್‌ವೆಸ್ಟಿಗೇಷನ್ ಯಾವಾಗ ಪ್ರಾರಂಭಮಾಡಿದೆ ?

ಶ್ರೀ ಪಿ. ಎಂ. ನಾಡಗೌಡ.— ಆ ತಾರೀಖು ಈಗ ಇಲ್ಲಿಲ್ಲ.

ಶ್ರೀ ಜಿ. ದುಗ್ಗಪ್ಪ.—ತನಿಖೆ ಪ್ರಾರಂಭಿಸಿರುವುದಾಗಿ ಉತ್ತರ ಕೊಟ್ಟಿದೆಯಲ್ಲಾ.

ಶ್ರೀ ಪಿ. ಎಂ. ನಾಡಗೌಡ.—ಇನ್‌ವೆಸ್ಟಿಗೇಷನ್ ಪ್ರಾರಂಭವಾಗಿದೆ, ಸ್ಪೆಷಲ್ ಆಡಿಟ್ ಸಿಬ್ಬಂದಿ ಇನ್‌ವೆಸ್ಟಿಗೇಷನ್ ಮಾಡುತ್ತಿದೆ. ತಾರೀಖು ನನ್ನಲ್ಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—(ಬ) ಮತ್ತು (ಸಿ) ಪ್ರಶ್ನೆಗಳಿಗೆ ತನಿಖೆ ನಡೆಸರಾಗುತ್ತಿದೆ ಎಂದು ಹೇಳಿ (ಎ) ಪ್ರಶ್ನೆಗೆ ಇಲ್ಲ, ಅನುಮತಿ ನೀಡಿಲ್ಲ, ಎಂದು ಹೇಳಿದೆ. ಇದರ ಅರ್ಥವೇನು ?

ಶ್ರೀ ಪಿ. ಎಂ. ನಾಡಗೌಡ.—ಪರ್ಮಿಷನ್ ಕೊಟ್ಟಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಪರ್ಮಿಷನ್ ಕೊಡದೆ ಹೇಗೆ ಮಾಡಿದರು ?

ಶ್ರೀ ಪಿ. ಎಂ. ನಾಡಗೌಡ.—ಬೈಲಾ ಪ್ರಕಾರ ಮಾಡಿರಬಹುದು.

Sri H. SIDDAVEERAPPA.—This Minister is becoming too technical.

Sri P. M. NADGOUDA.— That is a fact.

Sri G. CHANDRAKANTH.—Is it a fact that this society has sustained a loss of Rs. 30,000 by indulging in hybrid jowar cultivation ?

Sri P. M. NADGOUDA.—The society has derived an income of Rs. 20,000.

Sri S. SIVAPPA.—May I know the date on which the Government has ordered for investigation ?

ಶ್ರೀ ಪಿ. ಎಂ. ನಾಡಗೌಡ.—ಆ ತಾರೀಖು ಇಲ್ಲಿಲ್ಲ.

ಶ್ರೀ ಎನ್. ಎಲ್. ಬೆಲ್ಲದ.—ಈ ಸೊಸೈಟಿ ಪ್ರೊಡ್ಯೂಸ್ ಮಾಡುವುದಕ್ಕೆ ಅನುಮತಿ ಕೊಟ್ಟಿಲ್ಲ ವೆಂದು ಹೇಳಿದೆ. ಹಾಗಿದ್ದರೆ ಸೊಸೈಟಿಗೆ ಈ ಕೆಲಸಮಾಡುವುದಕ್ಕೆ ಬೈಲಾ ಪ್ರಕಾರ ಅವಕಾಶ ಏಪಡೆಯೇ ಎಂಬುದನ್ನು ನೋಡಿಸಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ನೋಡಿಸಿದ್ದೇವೆ, ಅವಕಾಶವಿದೆ. ಮುಂದೆ ತನಿಖೆ ನಡೆಯುತ್ತಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—31ನೇ ಜನವರಿ 1968ರಲ್ಲಿ ಪ್ರಶ್ನೆ ಕಳುಹಿಸಿದ್ದಾರೆ, 27ನೇ ಫೆಬ್ರುವರಿ 1968ರಲ್ಲಿ ತಾವು ಉತ್ತರ ಕೊಟ್ಟಿದ್ದೀರಿ. ಇಷ್ಟು ದಿವಸವಾದರೂ ಕೂಡ ಇನ್ನೂ ಇನ್‌ವೆಸ್ಟಿಗೇಷನ್‌ನಲ್ಲಿ ಇದೆ ಎಂದು ಹೇಳುತ್ತಾ ಇದ್ದೀರಿ. ಇದರಲ್ಲಿ ಏನೋ ಒಂದು ಒಳಗುಟ್ಟು ಇರುವುದರಿಂದ ಇದು ಅನುಮಾನಾಸ್ಪದವಾಗಿದೆಯಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಅನುಮಾನವೇನೂ ಇಲ್ಲ. ಸರ್ಕಾರದವರಿಗೆ ವ್ಯಾಳ್ಯ ಕೊಟ್ಟರೆ, ಎಲ್ಲಾ ಮಾಹಿತಿಯನ್ನೂ ತರಿಸಿಕೊಡುತ್ತೇವೆ.

ಶ್ರೀ ಎನ್. ಎಲ್. ಬೆಲ್ಲದ.—ಇದು ಬಹಳ ಮಹತ್ವದ ಪ್ರಶ್ನೆ, ಬೈಲಾದಲ್ಲಿ ಪ್ರೊವಿಜನ್ ಇದೆ, ಲೀಗಲ್ ಒಪೀನಿಯನ್ ಪಡೆಯಲಾಗಿದೆ ಎಂದು ತಾವು ಹೇಳಿದಿರಿ. ಈ ಯೋಜನೆಯನ್ನು ಆ ಸಂಘದವರು ತೆಗೆದುಕೊಂಡ ಮೇಲೆ ಏನಾದರೂ ಬೈಲಾವನ್ನು ತಿದ್ದುಪಡಿ ಮಾಡಿಕೊಂಡಿದ್ದಾರೆಯೇ ಅಥವಾ ಲೀಗಲ್ ಒಪೀನಿಯನ್ ಪಡೆದಿದ್ದಾರೆಯೇ ಅಥವಾ ಸ್ಕೀಂ ತೆಗೆದುಕೊಳ್ಳುವುದಕ್ಕಿಂತ ಮುಂಚೆಯೇ ಬೈಲಾದಲ್ಲಿ ಇತ್ತೇ ?

ಶ್ರೀ ಪಿ. ಎಂ. ನಾಡಗೌಡ.—ಮಾಹಿತಿ ಇರುವ ಪ್ರಕಾರ, ಬೈಲಾದಲ್ಲಿರುವ ಪ್ರಕಾರ ಎಲ್ಲ ಜವಾರ್ ಸೀಡ್ಸ್ ಕಡಿಮೆ ಇದೆ ಅಂಥಲ್ಲಿ ಮಾಡಲಿಕ್ಕೆ ಬರುತ್ತದೆ ಅಂತ ಮೊದಲೆ ಅಭಿಪ್ರಾಯ ತೆಗೆದುಕೊಂಡು ಮಾಡಿದ್ದಾರೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ದುಡ್ಡು ಮಿಸ್ ಅಪ್ರೊಪ್ರಿಯೇಟ್ ಆಗಿಪೆ ಅಂತ ಯಾರು ತಮ್ಮ ಗಮನಕ್ಕೆ ತಂದರು ?

ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆ ಬಂದ ಮೇಲೆ ನಮ್ಮ ಗಮನಕ್ಕೆ ಬಂತು. ತನಿಖೆ ಮಾಡುತ್ತಾ ಇದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಚೇರ್ಮನ್‌ರು ಮತ್ತು ಮ್ಯಾನೇಜ್‌ಮೆಂಟ್ ಕಮಿಟಿ ಇಬ್ಬರ ಮೇಲೂ ತನಿಖೆ ಮಾಡುತ್ತಾ ಇದ್ದೀರೋ ಅಥವಾ ಕೇವಲ ಚೇರ್ಮನ್‌ರ ವಿರುದ್ಧ ಮಾತ್ರ ಮಾಡುತ್ತಾ ಇದ್ದೀರೋ ?

ಶ್ರೀ ಪಿ. ಎಂ. ನಾಡಗೌಡ.—ಈ ವ್ಯವಹಾರದ ಬಗ್ಗೆ ಇದು ಯಾವ ರೀತಿ ಆಗಿದೆ ಎಂದು ಇವತ್ತಿನ ದಿವಸ ಹೇಳಲಿಕ್ಕೆ ಆಗುವುದಿಲ್ಲ. ಎಲ್ಲವನ್ನೂ ವಿಚಾರಮಾಡಿಯೇ ಇದನ್ನು ಸ್ಪೆಷರ್ ಆಡಿಟರ್ ಕಡೆಗೆ ಹಾಕಿದ್ದೇವೆ. ಅವರಿಂದ ರಿಪೋರ್ಟ್ ಬರುತ್ತದೆ, ಆಗ ಯಾವ ಯಾವ ಸಂಬಂಧ ಏನೇನು ವಿಚಾರ ಇದೆ ಅಂತ ಗೊತ್ತಾಗುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಹಾಗಾದರೆ ಸರಿಯಾಗಿ ವಿಚಾರ ತಿಳಿದುಕೊಳ್ಳದೆ ಉತ್ತರ ಕೊಟ್ಟಿದ್ದೀರಿ ಅಂತ ಹೇಳಬಹುದೆ ?

ಶ್ರೀ ಪಿ. ಎಂ. ನಾಡಗೌಡ.—ಅದಕ್ಕೆ ಪರಿಶೀಲನೆಯಲ್ಲಿಹೆ ಎಂದು ಹೇಳಿದ್ದೇನೆ.

ಶ್ರೀ ಬಾಪು ಗೌಡ.—ಈ ರಾಣಿಬೆನ್ನೂರಿನಲ್ಲಿ ಮಾಡಿದ್ದು ಕಮರ್ಷಿಯಲ್ ಜವಾರ್ ಸೀಡ್ಸ್ ಗಾಗಿಯೇ ಅಥವಾ ಸೀಡ್ ಪ್ರೊಡಕ್ಷನ್‌ಗೇ ?

ಶ್ರೀ ಪಿ. ಎಂ. ನಾಡಗೌಡ.—ಸೀಡ್ ಪ್ರೊಡಕ್ಷನ್‌ಗಾಗಿ ಮಾಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಅವರು ಪರ್ಮಿಷನ್ ಇಲ್ಲದೇ ಮಾಡಿದ್ದಾರೆ ಎಂದು ಹೇಳಿದ್ದೀರಿ. ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕು ಮತ್ತು ಅದರಂತೆಯೇ ಸ್ಟೇಟ್ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ ಅವರ ಕನ್‌ಸೆಂಟ್ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ಮೀರಿ ಅವರು ಮಾಡಿದ್ದಾರೆ, ಇದು ಸರಿಯಿಲ್ಲವೆಂದು ಹೇಳುವುದರ ಜೊತೆಗೆ ಇದು ಕಮರ್ಷಿಯಲ್ ಸೀಡ್ ಅಲ್ಲದೆ ಇರುವುದರಿಂದ ಇಷ್ಟು ಲುಕ್ಸಾನಾಗಿದೆ ಎಂಬುದು ತಮಗೆ ಗೊತ್ತೆ ?

ಶ್ರೀ ಪಿ. ಎಂ. ನಾಡಗೌಡ.—ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನ ಪರ್ಮಿಷನ್ ತೆಗೆದು ಕೊಂಡಿಲ್ಲ ಎಂದು ಹೇಳಿದೆ. ಬೇರೆ ಡಿಪಾರ್ಟ್‌ಮೆಂಟಿನ ಪರ್ಮಿಷನ್ ತೆಗೆದುಕೊಂಡದ್ದು ಗೊತ್ತಿಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಹೈಬ್ರಿಡ್ ಜವಾರ್ ಸ್ಕೀಂಗೆ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನ ಅನುಮತಿ ಬೇಕೇ ?

ಶ್ರೀ ಪಿ. ಎಂ. ನಾಡಗೌಡ.—ಆ ಮಾಹಿತಿ ಇಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಸ್ಕೀಂ ಪ್ರಕಾರ ಎಷ್ಟು ಕ್ವಿಂಟಾಲ್ ಹೈಬ್ರಿಡ್ ಜವಾರ್ ಪ್ರೊಕ್ಯೂರ್ ಮಾಡಿದ್ದಾರೆ ?

ಶ್ರೀ ಪಿ. ಎಂ. ನಾಡಗೌಡ.—ಬೇರೆ ಒಂದು ಪ್ರಶ್ನೆ ಕೇಳಿ.

Sri DIGAMBARA RAO B. KALMANKAR.—Government has *prima facie* come to know that jowar worth Rs. 22,000 has been misappropriated by the relative of the Chairman.

ಶ್ರೀ ಪಿ. ಎಂ. ನಾಡಗೌಡ.—ಅಷ್ಟು ವಿಷಯ ತಿಳಿಸಿದ್ದಾರೆ. ಅದನ್ನು ತಮಗೆ ತಿಳಿಸಿದೆ. ಅಲ್ಲಿ misuse ಆಗಿದೆ ಎಂದು ಯಾರೂ ಹೇಳಿಲ್ಲ.

ಶ್ರೀ ಎನ್. ಎರ್. ಬೆಲ್ಲದ.—ತಾವು ಒಂದು ಸ್ಪೆಷಲ್ ಆಡಿಟ್ ನೇಮಕ ಮಾಡಿರುವುದು ಲೆಕ್ಕಗಳ ತನಿಖೆಗಾಗಿ. ಆದರೆ ಈ ಸೀಡ್ ಕಾರ್ಪೊರೇಷನ್ನಿನವರಿಂದ ಅವರ ಸೆಂಟರಿನಲ್ಲಿ ಎಷ್ಟು ಬಿತ್ತನೆ ಬೀಜವನ್ನು ಉತ್ಪನ್ನ ಮಾಡಲಾಯಿತು, ಹಾಗೆ ಉತ್ಪನ್ನ ಮಾಡಿದ ಬೀಜವನ್ನು ಅವರು ಯಾವ ಯಾವ ಕ್ಷೇತ್ರಗಳಿಗೆ ಒದಗಿಸಿದ್ದಾರೆ—ಹಾಗೂ ಆ ಫಾರಮ್ಮನ್ನು ಯಾರ ಹೆಸರಿನಲ್ಲಿ ಬರೆದಿದ್ದಾರೆ ಅನ್ನುವುದನ್ನೆಲ್ಲಾ ಪತ್ತೆ ಮಾಡಲು ಇದನ್ನು ವಿಜಿಲೆನ್ಸ್ ಕಮಿಷನ್ನಿಗೆ ವಿಚಾರಣೆಗೆ ಒಳಪಡಿಸುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರಕ್ಕೆ ಈಗ ಒಂದು ನೋಡನೆ ಬಂದಿದೆ. ಅದನ್ನು ನಾವು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಸಹಕಾರ ಸಂಘದ ಅಧ್ಯಕ್ಷರು ಎಂ.ಪಿ.ಸಿ.ಸಿ.ಯ ಸದಸ್ಯರಾಗಿರುವುದರಿಂದ ಹಾಗೂ ಅವರು ಹಿಂದಿನ ಚುನಾವಣೆಯಲ್ಲಿ ಈ ಸಭೆಯ ಸ್ಥಾನಕ್ಕೆ ಒಬ್ಬ ಅಭ್ಯರ್ತಿಗಳೂ ಆಗಿದ್ದುದರಿಂದ ಅವರು ತಮ್ಮ ಮೇಲೆ ಛಂದು ಒತ್ತಾಯ ತಂದುದರಿಂದ ಅವರ ಬಗ್ಗೆ ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಲು ಸರ್ಕಾರದವರು ನಿಧಾನ ಮಾಡುತ್ತಿದ್ದಾರೆಂದರೆ ಮಂತ್ರಿಗಳು ಇದನ್ನು ಒಪ್ಪುತ್ತಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಒಪ್ಪುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಎಂ. ಎರ್. ಎ. ಆಗಲು ಚುನಾವಣೆಗೆ ನಿಂತಿದ್ದರು ಅನ್ನುವದನ್ನೂ ತಾವು ಒಪ್ಪುವುದಿಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ಒಪ್ಪುತ್ತೇನೆ, ಬಾಕಿ ವಿಚಾರವನ್ನು ಒಪ್ಪುವುದಿಲ್ಲ.

ಶ್ರೀ ಎನ್. ಎಲ್. ಬೆಲ್ಲದ.—ಅಲ್ಲಿ 45 ಸಾವಿರ ರೂಪಾಯಿ ದುರುಪಯೋಗವಾಗಿದೆ. ಆ ಹಣವನ್ನು ದುರುಪಯೋಗ ಪಡೆಸಿರತಕ್ಕವರು ಒಬ್ಬ ದೊಡ್ಡ ಕಾಂಗ್ರೆಸ್ ಪುಡಾರಿಗಳು ಮತ್ತು ಎಂ. ಪಿ. ಸಿ. ಸಿ. ಮೆಂಬರು. ಆದುದರಿಂದ ಅದನ್ನು ಅಲಕ್ಷ್ಯ ಮಾಡಬಾರದು ಅಂತ ನಾನು ಇದನ್ನು ಒತ್ತಾಯ ಮಾಡುತ್ತಿದ್ದೇನೆ. ಇದಕ್ಕೆ ತೀವ್ರ ಗಮನ ಕೊಡುತ್ತಿರಾ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದವರು ಯಾವತ್ತು ಅಲಕ್ಷ್ಯ ಮಾಡುತ್ತಿಲ್ಲ. ಹಾಗೆ ಅಲಕ್ಷ್ಯ ಭಾವನೆ ಇದ್ದಿದ್ದರೆ ನಾವು ಅದನ್ನು ಇನ್‌ವೆಸ್ಟಿಗೇಟ್ ಮಾಡಲು ಏಕೆ ಹೇಳುತ್ತಿದ್ದೆವು ?